ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ.: 2419222/2419567
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ: 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

(Re-accredited by NAAC at "A" Grade)
(NIRF-2021 Ranked 19 in University Category & 34 in Overall Category)

I.C.D. MANASAGANGOTHRI UNIVERSITY OF MYSORE, MYSORE
19/7/22
25/7/22

ಸಂಖ್ಯೆ: PMEB-1/43/Admission/2020-21

ದಿನಾಂಕ: 15-07-2022

## ಅಧಿಸೂಚನೆ

ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದ Specialized Program ಅಡಿಯಲ್ಲಿನ ವಿವಿಧ ಕೋರ್ಸ್‌ಗಳ 2022-23ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ/217/ಯುಎನ್‌ಇ/2022, ಬೆಂಗಳೂರು, ದಿನಾಂಕ: 09.07.2022.
2. ವಿಶ್ವವಿದ್ಯಾನಿಲಯದ ಅಧಿಸೂಚನೆ ದಿನಾಂಕ 12.07.2022.

*****

ಮೈಸೂರು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಯಲ್ಲಿ ಮಾನ್ಯತೆ ಪಡೆದು Specialized Program ಅಡಿಯಲ್ಲಿ ವಿವಿಧ ಕೋರ್ಸ್‌ಗಳನ್ನು ನಡೆಸುತ್ತಿರುವ ಸಂಸ್ಥೆಗಳಲ್ಲಿ 2022-23ನೇ ಶೈಕ್ಷಣಿಕ ಸಾಲಿಗೆ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

| | |
|---|---|
| ಸ್ನಾತಕ ಕೋರ್ಸ್‌ಗಳ ಪ್ರವೇಶಾತಿಗೆ ನಿಗದಿಪಡಿಸಿರುವ ಕೊನೆಯ ದಿನಾಂಕ **ದಂಡ ಶುಲ್ಕವಿಲ್ಲದೆ** | **16-08-2022** |
| ಸ್ನಾತಕ ಕೋರ್ಸ್‌ಗಳ ಪ್ರವೇಶಾತಿಗೆ ನಿಗದಿಪಡಿಸಿರುವ ಕೊನೆಯ ದಿನಾಂಕ ರೂ.1000/-ಗಳ **ದಂಡ ಶುಲ್ಕದೊಂದಿಗೆ** | **26-08-2022** |
| ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿಗೆ ನಿಗದಿಪಡಿಸಿರುವ ಕೊನೆಯ ದಿನಾಂಕ **ದಂಡ ಶುಲ್ಕವಿಲ್ಲದೆ** | **07-11-2022** |
| ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿಗೆ ನಿಗದಿಪಡಿಸಿರುವ ಕೊನೆಯ ದಿನಾಂಕ ರೂ.1000/-ಗಳ **ದಂಡ ಶುಲ್ಕದೊಂದಿಗೆ** | **21-11-2022** |

1. ಉಲ್ಲೇಖ(1)ರ ಆದೇಶದಲ್ಲಿನ ಸರ್ಕಾರದ ನಿರ್ದೇಶನದಂತೆ, 2022-23ನೇ ಶೈಕ್ಷಣಿಕ ಸಾಲಿನ ಸ್ನಾತಕ/ ಸ್ನಾತಕೋತ್ತರ/ ಡಿಪ್ಲೋಮ ಕೋರ್ಸ್‌ಗಳನ್ನು ಸರ್ಕಾರದ ಕೋವಿಡ್-19ನ್ನು ಮಾರ್ಗಸೂಚಿಗಳನ್ನು ಅನುಸರಿಸಿ ಪ್ರವೇಶಾತಿ ಮಾಡಲು ಈ ಮೂಲಕ ತಿಳಿಸಲಾಗಿದೆ.
2. ವಿಶ್ವವಿದ್ಯಾನಿಲಯ ಅಧಿಸೂಚನೆ ಸಂಖ್ಯೆ:R2-588/83-84, ದಿನಾಂಕ 24-11-1987ರ ರೀತ್ಯಾ ಒಬ್ಬ ವಿದ್ಯಾರ್ಥಿ ಏಕ ಕಾಲದಲ್ಲಿ ಎರಡು ಪದವಿ/ಕೋರ್ಸ್‌ಗಳನ್ನು ವ್ಯಾಸಂಗ ಮಾಡಲು ಅವಕಾಶ ಇರುವುದಿಲ್ಲ.
3. ನಿಮ್ಮ ಸಂಸ್ಥೆಗಳಲ್ಲಿನ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ 2022-23ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ ದಿನಾಂಕ 06-08-2022ರೊಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ, ಅನುಮೋದನೆ ಪಡೆಯುವುದು.
4. ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಕಾಲೇಜು/ಸಂಸ್ಥೆಗಳಲ್ಲಿನ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಇಚ್ಛಿಸುವ ಕರ್ನಾಟಕ ರಾಜ್ಯದ ಪಿ.ಯು. ಬೋರ್ಡ್ ಹೊರತುಪಡಿಸಿ / ಹೊರ ರಾಜ್ಯದ / NIOS / ವಿದೇಶಿ (Foreign National) ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಅರ್ಹತಾ ದೃಢೀಕರಣ ಪತ್ರದ (Eligibility Certificate) ಶುಲ್ಕವನ್ನು ಪಾವತಿಸಿರುವ ಬಗ್ಗೆ ಮತ್ತು ಅದರ ಪಾವಿತ್ರತೆ (Genuinity) ಬಗ್ಗೆ Verification ಹಂತದಲ್ಲಿ ಪರಿಶೀಲಿಸುವುದು.
5. ವಿಶ್ವವಿದ್ಯಾನಿಲಯಕ್ಕೆ ನಿಗದಿತ ಶುಲ್ಕ ಪಾವತಿಸದೆ / ಪೂರ್ಣ ದಾಖಲೆಗಳನ್ನು ಒದಗಿಸದಿದ್ದರೆ, ಅಂತಹ ವಿದ್ಯಾರ್ಥಿಗಳ ಪ್ರವೇಶಾತಿಗಳನ್ನು ವಿಶ್ವವಿದ್ಯಾನಿಲಯ ಅನುಮೋದಿಸುವುದಿಲ್ಲ.

ಪು.ತಿ.ನೋ...

6. ಯು.ಜಿ.ಸಿ. ಪತ್ರ ಸಂಖ್ಯೆ: F.1-15/2015(ARC), ದಿನಾಂಕ: 18-03-2016ರ ರೀತ್ಯಾ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದ ಎಲ್ಲಾ ಕಾಲೇಜುಗಳಲ್ಲಿ Anti-Ragging ಘಟಕವನ್ನು ಸ್ಥಾಪಿಸಿರಬೇಕು, ವಿದ್ಯಾರ್ಥಿಗಳು ಯಾವುದೇ ರೀತಿಯಲ್ಲಿ Raggingಗೆ ಒಳಗಾಗದಂತೆ (ಪ್ರಾಂಶುಪಾಲರು/ಮುಖ್ಯಸ್ಥರು/ನಿರ್ದೇಶಕರು ಸಮಿತಿಯ ವತಿಯಿಂದ) ಎಚ್ಚರವಹಿಸಬೇಕು.

7. ಪ್ರವೇಶಾತಿಗೆ ನಿಗದಿಪಡಿಸಿರುವ ಕೊನೆಯ ದಿನಾಂಕಗಳ ನಂತರ ಪ್ರವೇಶಾತಿ ಮಾಡಿಕೊಳ್ಳಬಾರದೆಂದು ಸೂಚಿಸಲಾಗಿದೆ.

8. ಪ್ರವೇಶಾತಿ ವಿಧಿ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ಬಗ್ಗೆ ವಿಶ್ವವಿದ್ಯಾನಿಲಯದ ನಿಯಮಗಳನ್ನು ಉಲ್ಲಂಘಿಸದಂತೆ ಕ್ರಮವಹಿಸುವುದು.

9. ಅನುಮೋದನೆಗೊಂಡಿರುವ ಕೋರ್ಸ್‌ಗಳಿಗೆ ಹಾಗೂ ನಿಗದಿಪಡಿಸಿರುವ ಸಂಖ್ಯಾಮಿತಿಯೊಳಗೆ ಮಾತ್ರ ಪ್ರವೇಶಾತಿ ನೀಡತಕ್ಕದ್ದು ಮತ್ತು ಪ್ರವೇಶಾತಿ ಅನುಮೋದನೆ ಕೋರುವ ಸಂದರ್ಭದಲ್ಲಿ ವಿಶ್ವವಿದ್ಯಾನಿಯದಿಂದ ಮಾನ್ಯತೆ ಪಡೆದಿರುವ ಬಗ್ಗೆ ಆದೇಶದ ಪ್ರತಿಯನ್ನು ತಪ್ಪದೇ (ಕಡ್ಡಾಯವಾಗಿ) ಪ್ರವೇಶಾತಿ ಪಟ್ಟಿಯ ಜೊತೆ ಲಗತ್ತಿಸಿರಬೇಕು. ಪ್ರತಿ ಇಲ್ಲವಾದಲ್ಲಿ, ಪ್ರವೇಶಾತಿ ಅನುಮೋದನೆಗಾಗಿ ಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ.

10. <u>**ಶುಲ್ಕ ಪಾವತಿಸುವ ವಿಧಾನ**</u>: ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಗಳವರೆಗೆ ಪಾವತಿಸಲಾಗಿರುವ ಒಟ್ಟು ಶುಲ್ಕವನ್ನು, ದಂಡಶುಲ್ಕ ಒಳಗೊಂಡಂತೆ ಪ್ರವೇಶಾತಿ ಕಡೆಯ ದಿನಾಂಕದ ನಂತರ ವಿಶ್ವವಿದ್ಯಾನಿಲಯದ ಸಹೋದ್ಯಮ ಕೋರ್ಸ್‌ಸ್ (Collaboration Courses) ಖಾತೆಗೆ ಜಮಾ ಆಗುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಶಾಖೆಯಲ್ಲಿ ಶುಲ್ಕಗಳನ್ನು ತಪ್ಪದೆ ಪಾವತಿಸಿರಬೇಕು. ಪ್ರವೇಶಾತಿ ಅನುಮೋದನೆ ಪಟ್ಟಿಯೊಂದಿಗೆ ಹಣ ಸಂದಾಯದ ಸಂಬಂಧ ದಾಖಲೆ ಸಲ್ಲಿಸಬೇಕು.

11. ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿ, ಅಂಕಿ ಅಂಶಗಳ ಪಟ್ಟಿಗಳನ್ನು ನಿಗದಿತ ನಮೂನೆಯಲ್ಲಿ ಪ್ರತ್ಯೇಕವಾಗಿ ಸಿದ್ಧಪಡಿಸಿ ತ್ರಿಪ್ರತಿಗಳಲ್ಲಿ ಪ್ರವೇಶಾತಿ ಶುಲ್ಕಗಳನ್ನು ಪಾವತಿಸಿರುವ ಮೂಲ ಚಲನ್ ಪ್ರತಿಯೊಡನೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು.

12. ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿರುವ ದಾಖಲಾತಿಗಳನ್ನು ಅನುಕ್ರಮವಾಗಿ ಜೋಡಿಸಿ ತಪ್ಪದೇ ಸಲ್ಲಿಸಬೇಕು.

13. ಯು.ಜಿ.ಸಿ., ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಲೋಕಸಭೆಯ ಸದಸ್ಯರುಗಳು ಆಗಿಂದಾಗ್ಗೆ ಕೋರುವ ಒಟ್ಟು ವಿದ್ಯಾರ್ಥಿಗಳ (ಜಾತಿ/ಉಪಜಾತಿ/ವರ್ಗವಾರು) ಸಂಖ್ಯೆಗಳನ್ನು ಇತರೆ ಅಂಶಗಳನ್ನು ಒದಗಿಸುವ ನಮೂನೆಗಳಲ್ಲಿ ಅಂಕಿ ಅಂಶಗಳ ಮಾಹಿತಿಗಳನ್ನು ಖಚಿತವಾಗಿ ನೀಡಬೇಕು. ಕಾಲೇಜು/ಸಂಸ್ಥೆಯ ವತಿಯಿಂದ ನೀಡಿದ/ನೀಡಲಾದ ಮಾಹಿತಿಯಲ್ಲಿ ತಪ್ಪುಗಳಿದ್ದಲ್ಲಿ ಸಂಸ್ಥೆಯ ನಿರ್ದೇಶಕರು/ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.

14. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 61ರಂತೆ ಪ್ರವೇಶಾತಿ ಅನುಮೋದನೆಯಾಗದ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ಈ ನಿಯಮವನ್ನು ಕಾಲೇಜು/ಸಂಸ್ಥೆಯ ನಿರ್ದೇಶಕರು/ಪ್ರಾಂಶುಪಾಲರು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮೇಲಿನ ಎಲ್ಲಾ ಸೂಚನೆ/ನಿಯಮಗಳನ್ನು ಕಾಲೇಜು/ಸಂಸ್ಥೆಯವರು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಇವರಿಗೆ;

1. ಮೈಸೂರು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿ ಒಳಗಿನ ಎಲ್ಲಾ Specialized/Specified Programme ಕಾಲೇಜು/ಸಂಸ್ಥೆಗಳ ಪ್ರಾಂಶುಪಾಲರು/ನಿರ್ದೇಶಕರುಗಳಿಗೆ – **ಸೂಕ್ತ ಕ್ರಮಕ್ಕಾಗಿ.**
2. ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ನಿರ್ದೇಶಕರು, ಐ.ಸಿ.ಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು– ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ **ಪ್ರಕಟಿಸಬೇಕಾಗಿ ಕೋರಿದೆ.**
4. ಸಂಬಂಧಪಟ್ಟ ಉಪ ಕುಲಸಚಿವ/ ಅಧೀಕ್ಷಕರು/ ಕಾರ್ಯನಿರ್ವಾಹಕರು–Specialized Program, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಮಾನ್ಯ ಕುಲಪತಿಯವರು/ಕುಲಸಚಿವರು/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈ.ವಿ.ವಿ. ನಿಲಯ, ಮೈಸೂರು.
6. ಕಛೇರಿ ಪ್ರತಿ.

Raj/Spl./Admission Approval